ತೆಗೆದುಕೊಂಡರೆ ಒಂದು ಕ್ಷೇತ್ರದಲ್ಲಿ ಒಂದು ಕೆರಯನ್ನು ಮುಕ್ತಾಯ ಮಾಡಬೇಕು. ಹತ್ತು ಕೆರೆ ಇದ್ದರೆ ಹತ್ತೂ ಕೆರೆಯ ಸ್ವಲ್ಪ ಸ್ವಲ್ಪ ಕೆಲಸ ಮಾಡುವುದರ ಮೂಲಕ ಯಾರಿಗೂ ನೀರು ಬರಲು ಸಾಧ್ಯವಿಲ್ಲ. ಜಿಲ್ಲಾಪರಿಷತ್‌ನಲ್ಲಿ ಹಾಗೆಯೇ ಆಯಿತು. ಆ ಕೆಲಸವನ್ನು ತಾವು ಮಾಡಬಾರದು. ತಾವು ಎಷ್ಟು ದಿವಸಗಳಲ್ಲಿ ಆ ಕೆರೆಯ ಕೆಲಸವನ್ನು ಮಾಡಿ ರೈತರಿಗೆ ನೀರನ್ನು ಕೊಡುತ್ತೀರಿ ಎಂಬ ಬಗ್ಗೆ ನಿರ್ದಿಷ್ಟವಾಗಿ ಹೇಳಿ.

ಶ್ರೀ ತಿಪ್ಪೇಸ್ವಾಮಿ: ಮಾನ್ಯ ಅಧ್ಯಕ್ಷರೇ, ಈ ಕೆರೆಯ ಕಾಮಗಾರಿಯನ್ನು ಮೊದಲು ಜಿಲ್ಲಾಪರಿಷತ್‌ನವರು ಮಾಡುತ್ತಿದ್ದರು. 1997ರಲ್ಲಿ ಅದು ನಮ್ಮ ಸಣ್ಣ ನೀರಾವರಿ ಇಲಾಖೆಗೆ ಬಂದಿದೆ. ನಾವು ಅಲ್ಲಿನ ರೈತರಿಗೆ ಪರಿಹಾರವನ್ನು ಕೊಟ್ಟಿಲ್ಲ. ಮುಂದಿನ ತಿಂಗಳ ಕೊನೆಯೊಳಗೆ ಪರಿಹಾರವನ್ನು ಕೊಡುವ ವ್ಯವಸ್ಥೆ ಮಾಡುತ್ತೇನೆ. ಈ ಕಾಮಗಾರಿಯ ಬಗ್ಗೆ ಎಷ್ಟು ಕೆಲಸವಾಗಿದೆ ಎಂಬ ಬಗ್ಗೆ ವರದಿಯನ್ನು ತರಿಸಿಕೊಂಡು ಹೆಚ್ಚು ಆದ್ಯತೆ ಕೊಟ್ಟು ಆನಂತರ ಇಷ್ಟು ದಿವಸಗಳಲ್ಲಿ ಆ ಕೆಲಸವನ್ನು ಮಾಡಿಮುಗಿಸುವ ಬಗ್ಗೆ ಭರವಸೆ ನೀಡುತ್ತೇನೆ. ಬರವಣಿಗೆಯ ಮೂಲಕ ತಮಗೆ ತಿಳಿಸುತ್ತೇನೆ. ಇದರಿಂದ ನೂರಾಹತ್ತು ಎಕರೆ ಪ್ರದೇಶಕ್ಕೆ ನೀರಾವರಿಯಾಗುತ್ತದೆಂದು ಅಂದಾಜಿದೆ. ಅಲ್ಲಾಗಿರುವ ಕೆಲಸದ ಪ್ರಮಾಣವನ್ನು ನೋಡಿ ಆನಂತರ ತಮಗೆ ಅದನ್ನು ಮುಗಿಸುವ ಬಗ್ಗೆ ದಿನಾಂಕವನ್ನು ಕೊಡುತ್ತೇನೆ. ರೈತರಿಗೇನು 3 ಲಕ್ಷದ 49 ಸಾವಿರ ಪರಿಹಾರ ಕೊಡಬೇಕಾಗಿದೆ ಅದನ್ನು ಮುಂದಿನ ತಿಂಗಳ ಕೊನೆಯೊಳಗೆ ಕೊಡಿಸುವ ಏರ್ಪಾಡು ಮಾಡುತ್ತೇನೆ.

ವಿಷಯ: ಬಿ.ಡಬ್ಲ್ಯೂ.ಎಸ್.ಎಸ್.ಬಿ.ನಲ್ಲಿನ 4ನೇ ವರ್ಗದ ನೌಕರರು

528 (3972)

ಶ್ರೀ ಪಿ.ಎಸ್.ಪ್ರಕಾಶ್ (ಚಿಕ್ಕಪೇಟೆ): ಮಾನ್ಯ ಬೆಂಗಳೂರು ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಜಲಮಂಡಳಿಯಲ್ಲಿ ಒಳ ಚರಂಡಿ ಕೆಲಸ ಮಾಡುವ (ಸ್ಯೂವರೇಜ್) 4ನೇ ದರ್ಜೆಯ ಸಿಬ್ಬಂದಿ ಎಷ್ಟು?

ಆ) ಪ್ರಸ್ತುತ ಸದರಿ ಸಿಬ್ಬಂದಿಯ ಕೊರತೆಯಿಂದ ಸಾರ್ವಜನಿಕರಿಗೆ ಅನಾನುಕೂಲತೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಶ್ರೀ ಅನಂತ್‌ನಾಗ್ (ಬೆಂಗಳೂರು ಅಭಿವೃದ್ಧಿ ರಾಜ್ಯ ಸಚಿವರು):

ಅ) ಪ್ರಸ್ತುತ 236 ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ.

ಆ) ಗಮನಕ್ಕೆ ಬಂದಿದೆ.

ಇ) ನಗರದ ವಿಸ್ತರಣೆ ಮತ್ತು ಕಾರ್ಯಬಾಹುಳ್ಯ ಇವುಗಳನ್ನು ಗಮನಿಸಿ, ಸುಮಾರು 120 ಸಿಬ್ಬಂದಿಯನ್ನು ಹೊಸದಾಗಿ ಕೆಲಸಕ್ಕೆ ಸೇರಿಸಿಕೊಳ್ಳುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಮಂಡಳಿಯು ಸಿಬ್ಬಂದಿಯ ಕೊರತೆಯನ್ನು ಗಮನಿಸಿ, ನಗರದ ಒಳಚರಂಡಿ ಕೊಳವೆಗಳನ್ನು ಸುಸ್ಥಿತಿಯಲ್ಲಿಡಲು ಈಗಾಗಲೇ 6 ಸ್ಯೂವರ್ ಕ್ಲೀನಿಂಗ್ ಯಂತ್ರಗಳನ್ನು ಹೊಂದಿದೆ ಮತ್ತು ಬಹುಪಾಲು ಪ್ರದೇಶಗಳಲ್ಲಿ ಅದನ್ನು ಉಪಯೋಗಿಸಲಾಗುತ್ತಿದೆ.

ಶ್ರೀ ಪಿ.ಎಸ್.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಬೆಂಗಳೂರು ಜಲಮಂಡಳಿಯ ಒಳಚರಂಡಿ ಮಂಡಳಿಯಲ್ಲಿ ನಾಲ್ಕನೇ ದರ್ಜೆಯ ಸಿಬ್ಬಂದಿ ಎಷ್ಟು ಎಂದು ಕೇಳಿದ್ದೆ ಅದಕ್ಕೆ 236 ಜನ ಎಂದು ಉತ್ತರ ಕೊಟ್ಟಿದ್ದಾರೆ. ಬೆಂಗಳೂರು ನಗರದಲ್ಲಿ 16 ವಿಧಾನಸಭಾ ಕ್ಷೇತ್ರಗಳು ನೂರು ವಾರ್ಡ್‌ಗಳು ಬರುತ್ತದೆ ಒಂದೊಂದು ವಿಧಾನಸಭಾ ಕ್ಷೇತ್ರದಲ್ಲಿ 7-8 ಜನ ಸ್ಯೂವರೇಜ್ ಸಿಬ್ಬಂದಿ ಕೆಲಸ ಮಾಡಿದರೆ ಹಳೆ ಭಾಗದ ಪರಿಸ್ಥಿತಿಯೇನು? ಬೆಂಗಳೂರಿನಲ್ಲಿ ಎಲ್ಲೂ ಸರಿಯಾಗಿ ಕೆಲಸವಾಗುತ್ತಿಲ್ಲ. ಬೇಸಿಗೆ ಕಾಲದಲ್ಲೂ ಪ್ರತಿನಿತ್ಯ ಮ್ಯಾನ್‌ಹೋಲ್ ನೀರಿನಿಂದ ಉಕ್ಕಿಹರಿಯುತ್ತಿರುತ್ತದೆ. ಶಾಸಕರು ನಿಂತು ಕೆಲಸ ಮಾಡಿಸಲು ಹೋದರೆ ಸಿಬ್ಬಂದಿಯ ಕೊರತೆ ಇದೆಯೆಂದು ಜಲಮಂಡಳಿಯಲ್ಲಿ ಹೇಳುತ್ತಾರೆ. ಸರ್ಕಾರಕ್ಕೆ ಸಿಬ್ಬಂದಿಯ ಕೊರತೆ ಇದೆಯೇ ಎಂದು ಕೇಳಿದರೆ ಬಂದಿದೆಯೆಂದು ಹೇಳುತ್ತಾರೆ. ಯಾವಾಗ ಸಿಬ್ಬಂದಿಗಳ ನೇಮಕ ಮಾಡಿಕೊಳ್ಳುತ್ತೀರೆಂದರೆ 120 ಜನರನ್ನು ನೇಮಕ ಮಾಡಿಕೊಳ್ಳುವುದಾಗಿ ಹೇಳುತ್ತಾರೆ. ತಾವು ಯಾವಾಗ ಸಿಬ್ಬಂದಿಗಳ ನೇಮಕ ಮಾಡಿಕೊಳ್ಳುತ್ತೀರ? ನೂರು ವಾರ್ಡ್‌ಗಳಿಗೆ 346ಜನ ಸಿಬ್ಬಂದಿ ಸಾಕಾಗುತ್ತದೆಯೇ? ಸ್ಯಾನಿಟರಿ ಲೈನ್‌ನ್ನು ಶುದ್ಧ ಮಾಡುವಂಥ ಆರು ಸ್ಯೂವರೇಜ್ ಯಂತ್ರಗಳಿದೆ. ಅದರಲ್ಲಿ ಮೂರು ಕೆಲಸ ಮಾಡುತ್ತಿಲ್ಲ. ಒಂದೊಂದು ವಿಧಾನ ಸಭಾ ಕ್ಷೇತ್ರಕ್ಕೆ ಒಂದೊಂದು ಸ್ಯೂವರೇಜ್ ಕ್ಲೀನಿಂಗ್ ಯಂತ್ರವನ್ನು ಖರೀದಿ ಮಾಡಿ ಕೊಡುವ ಉದ್ದೇಶವಿದೆಯೇ?

ಶ್ರೀ ಅನಂತ್‌ನಾಗ್: ಮಾನ್ಯ ಅಧ್ಯಕ್ಷರೆ, 1987ರಲ್ಲಿ ಸುಮಾರು 300 ರಷ್ಟಿದ್ದ ಸ್ಯೂವರೇಜ್ ಸಿಬ್ಬಂದಿಗಳಲ್ಲಿ ಅಕಾಲ ಮೃತ್ಯು, ನಿವೃತ್ತಿ ಮೊದಲಾದ ಕಾರಣದಿಂದ ಇಂದು 236ಕ್ಕೆ ಇಳಿದಿದೆ. ಆದ್ದರಿಂದ ಆದಷ್ಟು ಬೇಗ 120 ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವ ವ್ಯವಸ್ಥೆ ಮಾಡುತ್ತೇವೆ. ಮಾನ್ಯ ಸದಸ್ಯರು ಹೇಳಿದಂತೆ ಆರು ಯಂತ್ರದಲ್ಲಿ ಮೂರು ಕೆಟ್ಟಿಲ್ಲ. ಹೆಚ್ಚು ಯಂತ್ರಗಳು ಬೇಕಾದಲ್ಲಿ ಅದನ್ನು ಖರೀದಿ ಮಾಡುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಪಿ.ಎಸ್.ಪ್ರಕಾಶ್: ಮೂರು ವರ್ಷದಿಂದ ಇದೇ ಉತ್ತರವನ್ನು ಹೇಳುತ್ತಿದ್ದಾರೆ.

ಯಾವಾಗ ನೇಮಕಾತಿ ಮಾಡುತ್ತಾರೆಂದು ಹೇಳಬೇಕು.

ಶ್ರೀ ಅನಂತ್‌ನಾಗ್: ಎರಡು ತಿಂಗಳಿನಲ್ಲಿ ನೇಮಕ ಮಾಡುವ ವ್ಯವಸ್ಥೆ ಮಾಡುತ್ತೇನೆ.

ಶ್ರೀ ರಾಮಲಿಂಗಾರೆಡ್ಡಿ: ಮಾನ್ಯ ಅಧ್ಯಕ್ಷರೆ, ಸಿಬ್ಬಂದಿಯ ಕೊರತೆ ಇದೆ. ಇದರಿಂದ ಬೇರೆಯವರನ್ನು ಕ್ಲೀನ್ ಮಾಡಲು ಕರೆಯಬೇಕಾಗುತ್ತದೆ, ಅವರು ಇನ್ನೂರು ಮುನ್ನೂರು ರೂಪಾಯಿ ಕೇಳುತ್ತಾರೆ. ವಿಧಿ ಇಲ್ಲದೆ ಅಷ್ಟು ಹಣವನ್ನು ಕೊಟ್ಟು ಸ್ಯಾನಿಟರಿ ಕ್ಲೀನ್ ಮಾಡಿಸಿಕೊಳ್ಳಬೇಕಾದ ಪರಿಸ್ಥಿತಿ ಜನರಿಗೆ ಬಂದಿದೆ.

ಶ್ರೀ ಅನಂತ್‌ನಾಗ್: ನೇರ ನೇಮಕಾತಿ ಮಾಡುವ ವ್ಯವಸ್ಥೆ ಮಾಡುತ್ತೇನೆ.

ವಿಷಯ: ಗುಳೇದಗುಡ್ಡದಲ್ಲಿ 110 ಕಿ.ವ್ಯಾ.ಸ್ಟೇಷನ್

530 (3868)

ಶ್ರೀ ರಾಜಶೇಖರ ವಿ.ಶೀಲವಂತ (ಗುಳ್ಳೇದಗುಡ್ಡ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಳೇದಗುಡ್ಡ ನಗರದಲ್ಲಿ 110 ಕೆ.ವಿ.ಸ್ಟೇಷನ್ ಸ್ಥಾಪಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ?

ಆ) ಇದ್ದರೆ ಯಾವಾಗ ಪ್ರಾರಂಭಿಸಲಾಗುವುದು? ಇಲ್ಲದಿದ್ದರೆ ಅದಕ್ಕೆ ಕಾರಣವೇನು?

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು):

ಅ) ಹೌದು.

ಆ) ಮಂಡಳಿಯ ತಾತ್ರಿಕ ಮತ್ತು ಆಡಳಿತಾತ್ಮಕ ಅನುಮೋದನೆ ಪಡೆದ ನಂತರ ಸದರಿ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಶ್ರೀ ರಾಜಶೇಖರ್ ವಿ.ಶೀಲವಂತ: ಮ್ಯಾನ ಅಧ್ಯಕ್ಷರೆ, ಬಾಗಲಕೋಟೆಯಲ್ಲಿ 110 ಕೆ.ವಿ. ಸ್ಟೇಷನ್‌ನ್ನು ಬದಲಾವಣೆ ಮಾಡಿ 210 ಕೆ.ವಿ.ಸ್ಟೇಷನ್‌ಗೆ ಮಾಡಿ ನಂತರ ಗುಳೇದಗುಡ್ಡದಲ್ಲಿ 110 ಕೆ.ವಿ.ಸ್ಟೇಷನ್ ಮಾಡುವ ಬಗ್ಗೆ ಅಧಿಕಾರಿಗಳಿಂದ ತಿಳಿದುಕೊಂಡಿದ್ದೇನೆ. ಮುಂದಿನ ಹಣಕಾಸು ವರ್ಷದಲ್ಲಾದರು ಇದನ್ನು ಮಾಡಿಕೊಳ್ಳುತ್ತೀರಾ ಎಂದು ಕೇಳಬಯಸುತ್ತೇನೆ.

ಶ್ರೀ ಶರಣ ಬಸಪ್ಪ ದರ್ಶನಾಪುರ್: ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಪ್ರಾಜೆಕ್ಟ್